■ ಶಂ.ನ. ಶೇಷಗಿರಿ, ಜಯಪುರ

# ರಾಜ್ ಸಹಿ ಪಡೆದು ಧನ್ಯನಾದೆ



ಕನ್ನಡಿಗರ ಕಣ್ಮಣಿ ರಾಜಕುಮಾರ್ ಎಂದರೆ ಯಾರಿಗೆ ತಾನೇ ಇಷ್ಟವಿಲ್ಲ? ಅವರನ್ನು ಹತ್ತಿರದಿಂದ ನೋಡಬೇಕು, ಅವರೊಂದಿಗೆ ಮಾತನಾಡಬೇಕು, ಅವರ ಜತೆಗೆ ಫೋಟೊ ತೆಗೆಸಿಕೊಳ್ಳಬೇಕು ಎಂಬ ಹಂಬಲ ನನ್ನಂತಹ ಎಲ್ಲ ಅಭಿಮಾನಿಗಳದ್ದು.

ನಾನು ರಾಜ್‌ರವರ ಕಟ್ಟಾ ಅಭಿಮಾನಿ. ಅವರ ಅನೇಕ ಚಿತ್ರಗಳನ್ನು ನೋಡಿ ತುಂಬಾ ಮೆಚ್ಚಿದ್ದ ನನಗೆ, ರಾಜ್ ಬಂಧನವಾದಾಗ, ನಾನು ಪಾರ್ವತಮ್ಮ ರಾಜಕುಮಾರ್ ಅವರಿಗೆ ಶೃಂಗೇರಿ ಶಾರದಾಂಬೆಯ ಪ್ರಸಾದ ಕಳಿಸಿ ರಾಜ್ ಬೇಗ ಬಿಡುಗಡೆಯಾಗಲೆಂದು ಪ್ರಾರ್ಥಿಸಿದ್ದೆ. ರಾಜಕುಮಾರ್ ಬಗ್ಗೆ 500ಕ್ಕೂ ಹೆಚ್ಚು 'ನುಡಿ ಚಿತ್ರ' ಸಂಗ್ರಹ ಇಟ್ಟುಕೊಂಡಿದ್ದೆ. ಅವರ ಸಾವಿರಾರು ರೀತಿ ವಿವಿಧ ಭಂಗಿಗಳ ಚಿತ್ರ ಜೋಡಿಸಿದ್ದೆ.

ಅಂತೂ ಕೊನೆಗೆ ರಾಜ್‌ರವರನ್ನು ಕಾಡುಗಳ್ಳ ವೀರಪ್ಪನ್ ಬಿಡುಗಡೆಗೊಳಿಸಿದ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ರಾಜ್ ಬಗ್ಗೆ 'ಧನ್ಯ ಮಿಲನ' ಸಮಾರಂಭ ಏರ್ಪಡಿಸಿದ್ದೆವು. ನಾನು ಸಂಗ್ರಹಿಸಿದ ಎಲ್ಲಾ ಚಿತ್ರಗಳನ್ನು ಬೆಂಗಳೂರಿಗೆ ತೆಗೆದುಕೊಂಡು ಹೋಗಿ ಸಮಾರಂಭದಲ್ಲಿ ಪ್ರದರ್ಶಿಸಲು ಯೋಚಿಸಿದೆ. ಬೆಂಗಳೂರಿಗೆ ಹಿಂದಿನ ದಿನ ಹೋಗಿ ನನ್ನ ಕಿರಿಯ ಆತ್ಮೀಯ ಮಿತ್ರ ನಾಗಾನಂದರವರೊಡನೆ ಚಿತ್ರಗಳನ್ನು ತೆಗೆದುಕೊಂಡು ಹೋಗಿ, ಅಲ್ಲಿದ್ದ ಪೊಲೀಸರೊಡನೆ ಪ್ರದರ್ಶನ ಬಗ್ಗೆ ವಿಚಾರಿಸಿದೆ. ಆಗ ಅವರು 'ಇಲ್ಲಿನ ರಾಜ್ ಅಭಿಮಾನಿಗಳು ಒಂದು ರೀತಿ ಹುಚ್ಚರು. ನೀವು ಅಲ್ಲಿ ಪ್ರದರ್ಶನ ಮಾಡಿದರೆ ನಿಮ್ಮ ಚಿತ್ರ ಸಂಗ್ರಹವನ್ನೆಲ್ಲ ಒಂದೂ ಬಿಡದೆ ಕೊಂಡೊಯ್ಯುತ್ತಾರೆ ಎಂದು ಎಚ್ಚರಿಸಿದರು. ಆಗ ನಿರಾಶನಾಗಿ ಹಿಂದಿರುಗಿದ್ದೆ.

ಮರುದಿನ ಪತ್ರಿಕೆಯಲ್ಲಿ 'ಧನ್ಯ ಮಿಲನ' ಕಾರ್ಯಕ್ರಮದ ವರದಿ ಪ್ರಕಟಗೊಂಡಿತ್ತು. ಅವೆಲ್ಲವನ್ನು ಸಂಗ್ರಹಿಸಿ ರಾಜಕುಮಾರ್‌ಗೆ ತೋರಿಸಬೇಕು ಎಂಬ ಆಸೆ ಮೂಡಿತು. ಮರುದಿನ ಗೆಳೆಯ ನಾಗಾನಂದರ ಜೊತೆಯಲ್ಲಿ ರಾಜ್‌ರವರನ್ನು ನೋಡಲು ಹೋದಾಗ ನನ್ನಂತೆ ನೂರಾರು ಅಭಿಮಾನಿಗಳು ರಾಜ್‌ರವರ ದರ್ಶನಕ್ಕೆ ಉದ್ದ ಸಾಲಿನಲ್ಲಿ ನಿಂತಿದ್ದು ನೋಡಿ ದಿಗ್ಭ್ರಮೆಯಾಯಿತು. ಆಗಲೂ ನಿರಾಶೆ ಆಯಿತು. ಅಲ್ಲಿ ರಾಜ್‌ಕುಮಾರ್ ಆಪ್ತ ಸಾ.ರಾ. ಗೋವಿಂದು ಅವರ ಹತ್ತಿರ ಹೋಗಿ ವಿಷಯ ತಿಳಿಸಿದೆ. ಕೈಯಲ್ಲಿದ್ದ ದೊಡ್ಡ ಕಟ್ಟು ಇದಿದ್ದನ್ನು ಗಮನಿಸಿ ಸಾ.ರಾ. ಗೋವಿಂದು ಅದೇನೆಂದು ವಿಚಾರಿಸಿದರು. ರಾಜ್‌ರವರ ಬಗ್ಗೆ ಮಾಡಿದ 'ನುಡಿ ಚಿತ್ರಗಳ ಸಂಗ್ರಹ' ಎಂದು ಹೇಳಿದಾಗ 'ಅವಕಾಶ ಮಾಡಿಕೊಡುವೆ' ಎಂದರು. ಆಗ ನನಗಾದ ಸಂಭ್ರಮ ಹೇಳತೀರದು.

ಬೆಳಗಿನಿಂದ ಕಾದು ನಿಂತಿದ್ದ ಅಭಿಮಾನಿಗಳಿಗೆ ಸುಮಾರು 11 ಗಂಟೆಗೆ ರಾಜ್ ದಂಪತಿ ದರ್ಶನ ಕೊಟ್ಟಾಗ ಎಲ್ಲರಿಗೂ ಒಂದು ರೀತಿ ಸಂಭ್ರಮ, ಸಂತಸ.

ರಾಜ್ ಪಾರ್ವತಮ್ಮನವರು ಬಂದಾಗ ರಾಜ್ ಭಕ್ತರಿಗೆ ಒಂದು ರೀತಿಯ ರೋಮಾಂಚನ, ಸಂಭ್ರಮ. ಅನೇಕರು ರಾಜ್‌ಕುಮಾರ್‌ರವರ ಕಾಲು ಮುಟ್ಟಿ ನಮಸ್ಕರಿಸಿ ಅವರ ಅಭಿಮಾನ ಪ್ರದರ್ಶಿಸಿದರು. ನೂರಾರು ಅಭಿಮಾನಿಗಳು ಇದ್ದ ಸರತಿ ಸಾಲು ಮುಗಿದ ನಂತರ ರಾಜ್ ದಂಪತಿಗಳೂ ಸೀದಾ ಮನೆಯೊಳಗೆ ಹೋದಾಗ ನನಗೆ ಎಲ್ಲಿಲ್ಲದ ನಿರಾಶೆ. ಸ್ವಲ್ಪ ಹೊತ್ತಿನ ನಂತರ ಸಾ.ರಾ. ಗೋವಿಂದರವರು ನಮ್ಮನ್ನು ಮನೆಯೊಳಗೆ ಕರೆದಾಗ ನಮಗೆ ಮತ್ತೂ ಎಲ್ಲಿಲ್ಲದ ಆನಂದ, ಸಂಭ್ರಮ. ದೂರದಿಂದ ನೋಡಿದ ರಾಜ್‌ಕುಮಾರ್‌ರವರನ್ನು ಹತ್ತಿರದಿಂದ ನೋಡುವ ಭಾಗ್ಯ ನಮ್ಮದಾಯಿತು. ಮನಸ್ಸಿನಲ್ಲಿ ಹೇಳಲಾರದ ಹಿಗ್ಗು, ಜೊತೆಗೆ ಕೈಯಲ್ಲಿದ್ದ ಭಗವದ್ಗೀತೆಯ ಪುಸ್ತಕವನ್ನು ರಾಜ್‌ರವರಿಗೆ ನೀಡಿದ್ದಲ್ಲದೆ ಹಾರ ಹಾಕಿ, ಹಣ್ಣು ಹಂಪಲು ನೀಡಿ ನಮಸ್ಕರಿಸಿದೆ. ಕೈಯಲ್ಲಿದ್ದ ರಾಜ್‌ಕುಮಾರ್‌ರವರ ಬಗ್ಗೆ ಸಂಗ್ರಹಿಸಿದ ವಿಶಿಷ್ಟ 'ನುಡಿಚಿತ್ರ' ತೋರಿಸಿದೆ. ರಾಜ್‌ಕುಮಾರ್ ತುಂಬಾ ಸಂತಸಪಟ್ಟರಲ್ಲದೆ 25 ವರ್ಷದ ಹಿಂದಿನ ತಮ್ಮ ವಿಶೇಷ ನುಡಿಚಿತ್ರ ನೋಡಿ 'ಇದನ್ನು ಕೊಡುತ್ತೀರಾ?' ಎಂದು ಕೇಳಿದರು. ನನಗೆ ಏನು ಹೇಳಬೇಕೋ ಗೊತ್ತಾಗದೆ 'ನನ್ನ ಸಂಗ್ರಹಕ್ಕೆ ಬೇಕು' ಎಂದು ಉತ್ತರಿಸಿದೆ. ನನ್ನ ಜೊತೆ ಬಂದಿದ್ದ ಗೆಳೆಯ ನಾಗಾನಂದ ಫೋಟೊ ಕ್ಲಿಕ್ಕಿಸುತ್ತಿದ್ದ, ರಾಜ್‌ಕುಮಾರ್‌ರವರನ್ನು ತದೇಕದೃಷ್ಟಿಯಿಂದ ನೋಡುತ್ತಿದ್ದ ನನಗೆ ರಾಜ್ ನನ್ನನ್ನು ಎಚ್ಚರಿಸಿ 'ಫೋಟೊ ಕಡೆ ನೋಡಿ' ಎಂದರು.

ನಾನು ಮಾಡಿದ 'ನುಡಿ ಚಿತ್ರ'ವೊಂದಕ್ಕೆ ಸಹಿ ಮಾಡಿ ಎಂದು ರಾಜ್‌ರವರನ್ನು ವಿನಂತಿಸಿಕೊಂಡೆ. ಆಗ ಪಾರ್ವತಮ್ಮ ರಾಜ್‌ಕುಮಾರ್ 'ಅವರು ತುಂಬಾ ಸುಸ್ತಾಗಿದ್ದಾರೆ, ಇನ್ನೊಮ್ಮೆ ಬನ್ನಿ' ಎಂದಾಗ ತುಂಬಾ ನಿರಾಶೆಯಾಯಿತು. ಆದರೆ ರಾಜಕುಮಾರ್ ನನ್ನ ಸಂಗ್ರಹದ ಪುಸ್ತಕಕ್ಕೆ 'ನಿಮ್ಮ ರಾಜ್‌ಕುಮಾರ್' ಎಂದು ಅಮೂಲ್ಯ ಸಹಿ ಮಾಡಿ ಕೊಟ್ಟರು.

ಇದು ಮರೆಯಲಾರದ ಸ್ಮರಣೀಯ ಮಧುರ ನೆನಪು. ಅವರಿಗೆ ಆತ್ಮೀಯವಾಗಿ ನಮಸ್ಕರಿಸಿ ಊರಿಗೆ ಹಿಂದಿರುಗಿದೆ. 2001ರಲ್ಲಿ ನಡೆದ ಈ ಸವಿ ನೆನಪು ಈಗಲೂ ಕಣ್ಣಿಗೆ ಕಟ್ಟಿದಂತಿದೆ. ■